**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 3839/2021**

| | | | |
|---|---|---|---|
| **ಹೆಸರು** | : | **ಜಗನ್ನಾಥ** | **ದೋ.ಸಾ. 5** |
| **ತಂದೆಯ ಹೆಸರು** | : | **ಮಾನಪ್ಪ** | **ಪ್ರಾ.ಸಾ. 2** |
| **ವಯಸ್ಸು** | : | **30 ವರ್ಷ** | **ದಿನಾಂಕಃ 11-01-2024** |
| **ಉದ್ಯೋಗ** | : | **ಕೂಲಿ** | |
| **ವಾಸಸ್ಥಳ** | : | **ಕಲ್ಲೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ಮತ್ತು 4 ಗೊತ್ತಿಲ್ಲ.

ಈಗ ನನಗೆ ತೋರಿಸಲಾದ ನಿಪಿ-1 ದಾಖಲೆಯಲ್ಲಿರುವ ಸಹಿ ನನ್ನದೇ. ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಈಗ್ಗೆ 2 ವರ್ಷಗಳ ಹಿಂದೆ ನಾನು ಕಲ್ಲೂರು ಗ್ರಾಮದ ರತ್ತೆಯಲ್ಲಿ ನಿಂತಿದ್ದಾಗ ಅಲ್ಲಿಗೆ ಬಂದಿದ್ದ ಪೋಲಿಸರು ನಿಪಿ-1 ರ ದಾಖಲೆ ಮೇಲೆ ನನ್ನ ಸಹಿ ಪಡೆದರು. ಅದೇ ಸಂದರ್ಭದಲ್ಲಿ ಈಗ ನನಗೆ ತೋರಿಸಲಾದ ನಿಪಿ-2 ರ ಫೋಟೋವನ್ನು ಪೋಲಿಸರು ಪಡೆದುಕೊಂಡರು. ನಿಪಿ-1 ರ ದಾಖಲೆಯ ಮೇಲೆ ನನ್ನ ಸಹಿಯನ್ನು ಮತ್ತು ನಿಪಿ-2 ರ ಫೋಟೋವನ್ನು ಯಾವ ಉದ್ದೇಶಕ್ಕೆ ಪಡೆಯಲಾಯಿತು ಎಂದು ನನಗೆ ಗೊತ್ತಿಲ್ಲ.

ನಿಪಿ-1 ರ ದಾಖಲೆಯಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲೀಸರು ಅದನ್ನು ನನಗೆ ಓದಿ ಹೇಳಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿ ನನ್ನ ಸಮಕ್ಷಮ ಯಾವುದೇ ವಾಹನವನ್ನು ಜಪ್ತಿ ಮಾಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರು ಜರುಗಿಸಿದ ಪಂಚನಾಮೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 14-03-2021 ರಂದು ಕಲ್ಲೂರು ಗ್ರಾಮದಲ್ಲಿರುವ ಸೋಮನಿಂಗದಳ್ಳಿ ಮುಖ್ಯ ರಸ್ತೆಯ ಪಕ್ಕದಲ್ಲಿರುವ ಚನ್ನಾರೆಡ್ಡಿ ಎಂಬುವವರ ಮನೆಯ ಮುಂದೆ ಈ ಪ್ರಕರಣದ ಪಿರ್ಯಾದಿ ಚಾಸಾ-1 ರವರು ತೋರಿಸಿದಂತೆ ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಪೋಲೀಸರು ಅಪಘಾತ ಪ್ರಕರಣವೊಂದಕ್ಕೆ ಸಂಬಂಧಪಟ್ಟಂತೆ ನಿಪಿ-1 ರ ಪಂಚನಾಮೆಯನ್ನು ಬೆಳಿಗ್ಗೆ 10-30 ರಿಂದ 11-30 ವರೆಗೆ ಬರೆದರು ಎನ್ನುವುದು ಸರಿಯಲ್ಲ. ಸದರಿ ಸಂದರ್ಭದಲ್ಲಿ ನಿಪಿ-2 ರ ಫೋಟೋವನ್ನು ಪೋಲಿಸರು ಪಡೆದುಕೊಂಡರು ಮತ್ತು ಅಪಘಾತ ಪಡಿಸಿದ್ದ ಕೆಎ 32 ಇಎಕ್ಸ 9069 ರ ಬೈಕನ್ನು ಜಪ್ತು ಮಾಡಿದ್ದರು ಎಂದರೆ ಸರಿಯಲ್ಲ.

ನಿಪಿ-1 ರ ದಾಖಲೆಯನ್ನು ಪೋಲೀಸರು ನನಗೆ ಓದಿ ಹೇಳಿದ್ದರು ಎನ್ನುವುದು ಸರಿಯಲ್ಲ.

ನನ್ನ ಸಮಕ್ಷಮವೇ ನಿಪಿ-1 ರ ಪಂಚನಾಮೆಯನ್ನು ಪೋಲೀಸರು ಜರುಗಿಸಿ ಬೈಕನ್ನು ಜಪ್ತು ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ವಿ.ಬಿ.ಡಿ. ವಕೀಲರಿಂದಃ ಇಲ್ಲಾ</u>**

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ.**